ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ    ದಿನಾಂಕ : DATE : 19/07/2019

# ಶ್ರೀಮಂತ ಪಾಟೀಲ್‌ಗೆ ಭದ್ರತೆ ಕೊಡಿ: ಸ್ಪೀಕರ್

ಬೆಂಗಳೂರು: ವಿಶ್ವಾಸಮತ ಯಾಚನೆ ವೇಳೆ ಅನಾರೋಗ್ಯದ ಕಾರಣ ನೀಡಿ ಗೈರುಹಾಜರಾಗಿರುವ ಶ್ರೀಮಂತ ಪಾಟೀಲ್ ಅವರಿಗೆ ಸಂಬಂಧಿಸಿದಂತೆ ನಡೆದಿರುವ ಘಟನಾವಳಿಗಳು ಸಹಜವಾಗಿ ಕಾಣುತ್ತಿಲ್ಲ. ಈ ಘಟನೆಯಿಂದ ನಾನು ತುಂಬಾ ವಿಚಲಿತನಾಗಿದ್ದೇನೆ. ಗೃಹ ಸಚಿವರು ಕೂಡಲೇ ಅವರ ಕುಟುಂಬದ ಸದಸ್ಯರನ್ನು ಸಂಪರ್ಕಿಸಿ ವರದಿ ನೀಡಬೇಕು. ಶಾಸಕರಿಗೆ ಸೂಕ್ತ ಭದ್ರತೆ ಒದಗಿಸಬೇಕು ಎಂದು ವಿಧಾನಸಭೆ ಸಭಾಧ್ಯಕ್ಷ ಕೆ.ಆರ್. ರಮೇಶ್ ಕುಮಾರ್ ಆದೇಶಿಸಿದರು.

ಸದನದಲ್ಲಿ ಶ್ರೀಮಂತ ಪಾಟೀಲ್ ಕುರಿತು ಪ್ರಸ್ತಾಪದ ಬಳಿಕ ಮಾತನಾಡಿದ ಅವರು, ಈ ಪ್ರಕರಣದಲ್ಲಿ ಹಲವು ಅನುಮಾನಗಳು ಮೂಡಿವೆ. ಕೂಡಲೇ ಗೃಹ ಸಚಿವರು ಅವರ ಕುಟುಂಬ ಸದಸ್ಯರನ್ನು ಸಂಪರ್ಕಿಸಬೇಕು. ನೀವು ನಿಮ್ಮ ಜವಾಬ್ದಾರಿ ನಿರ್ವಹಣೆಯಲ್ಲಿ ವಿಫಲವಾದರೆ ಶುಕ್ರವಾರ ನಿಮ್ಮ ಪೊಲೀಸ್ ಮಹಾ ನಿರ್ದೇಶಕರನ್ನೇ ಕರೆಸಿಕೊಂಡು ನಿರ್ದೇಶನ ನೀಡುತ್ತೇನೆ ಎಂದು ಗೃಹ ಸಚಿವರಿಗೆ ತಿಳಿಸಿದರು.

## ಒತ್ತಾಯದಿಂದ ಕರೆದೊಯ್ದಿಲ್ಲ: ಪಾಟೀಲ್ ಪತ್ನಿ

ಅಥಣಿ: ನನ್ನ ಪತಿಯನ್ನು ಯಾರೂ ಒತ್ತಾಯದ ಮೇರೆಗೆ ಕರೆದುಕೊಂಡು ಹೋಗಿಲ್ಲ, ದೀರ್ಘಕಾಲದಿಂದ ಕಾಡುತ್ತಿದ್ದ ಹೃದಯ ಸಂಬಂಧಿ ತೊಂದರೆ ಬುಧವಾರ ರಾತ್ರಿ ಮತ್ತೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರು ಒಬ್ಬರೇ ಸ್ವತಃ ಹೋಗಿ ಮುಂಬೈನ ಸಂಜೀವಿನಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ ಎಂದು ಕಾಗವಾಡ ಶಾಸಕ ಶ್ರೀಮಂತ ಪಾಟೀಲ ಅವರ ಪತ್ನಿ ಉಜ್ವಲಾ ಪಾಟೀಲ ತಿಳಿಸಿದ್ದಾರೆ. ಪತಿ ಬಳಿ ಮಕ್ಕಳೇ ಇದ್ದಾರೆ. ಅಲ್ಲಿ ಯಾವುದೇ ಪಕ್ಷದ ಕಾರ್ಯಕರ್ತರು, ಮುಖಂಡರು ಇಲ್ಲ ಎಂದಿದ್ದಾರೆ.